**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು-1**

ಸಂಖ್ಯೆ: ಎಡಿಎಂ2/ಸೂರ್ಯೋತ್ಸವ 01/2009-10 ದಿನಾಂಕ: 01-07-09

## ಸುತ್ತೋಲೆ

ವಿಷಯ: ಸೂರ್ಯೋತ್ಸವ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ಬಗ್ಗೆ

-------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 22.07.2009 ರಂದು ಸೂರ್ಯಗ್ರಹಣ ಸಂಭವಿಸಲಿದ್ದು ಉತ್ತರ ಭಾರತದಲ್ಲಿ ಸಂಪೂರ್ಣ ಹಾಗೂ ದಕ್ಷಿಣ ಭಾರತದಲ್ಲಿ ಪಾರ್ಶ್ವಗ್ರಹಣವನ್ನು ವೀಕ್ಷಿಸಬಹುದಾಗಿದೆ. ಈ ಗ್ರಹಣ ಅಪರೂಪದ್ದಾಗಿದ್ದು ಇದರ ವೀಕ್ಷಣೆಯ ಸುವರ್ಣ ಅವಕಾಶವನ್ನು ರಾಜ್ಯದ ಎಲ್ಲ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಗೂ ಒದಗಿಸಿಕೊಡಲು ಹಾಗೂ ಈ ಎಲ್ಲಾ ಕಾರ್ಯಕ್ರಮಗಳನ್ನು ವಿಜ್ಞಾನ ಕ್ಲಬ್‌ನ ಅಡಿಯಲ್ಲಿ ಸಂಘಟಿಸಲು ಈ ಮೂಲಕ ಸೂಚಿಸಿದೆ.

1. ಜುಲೈ 22ರಂದು ಬೆಳಿಗ್ಗೆ 6 ರಿಂದ 8 ರ ನಡುವೆ ಶಾಲೆಗಳಲ್ಲಿ **ಸೂರ್ಯೋತ್ಸವ** ಕಾರ್ಯಕ್ರಮವನ್ನು ಸಂಘಟಿಸುವುದು. ಇದರ ಅಂಗವಾಗಿ ಸುರಕ್ಷಿತವಾಗಿ ಗ್ರಹಣ ವೀಕ್ಷಣೆ, ಕಂಪ್ಯೂಟರ್-ಟಿ.ವಿ ಗಳ ಮೂಲಕ ಸಂಪೂರ್ಣ ಗ್ರಹಣದ ವೀಕ್ಷಣೆ ನಡೆಸಿ, ನಡುವೆ ಪ್ರಶ್ನೋತ್ತರ ನಡೆಸುವುದು ಹಾಗೂ ಆಹಾರ ಸೇವನೆ ಮಾಡುವುದು. ಗ್ರಹಣದ ಸುರಕ್ಷಿತ ವೀಕ್ಷಣೆಗೆ ಸೋಲಾರ್ ಫಿಲ್ಟರ್ ಅಥವಾ ಪಿನ್ ಹೋಲ್ ಕ್ಯಾಮೆರ ಬಳಸುವುದು. ನೇರವಾಗಿ ಬರಿಗಣ್ಣಿನಿಂದ ವೀಕ್ಷಿಸಬಾರದು.
2. ಪಠ್ಯಪುಸ್ತಕಗಳಲ್ಲಿ ಗ್ರಹಣ, ಸೌರವ್ಯೂಹ, ನಕ್ಷತ್ರಗಳು, ವಿಶ್ವ ಹೀಗೆ ಖಗೋಳ ವಿಜ್ಞಾನಕ್ಕೆ ಸಂಬಂಧಿಸಿದ ವಿಷಯಗಳನ್ನು ಪಟ್ಟಿ ಮಾಡಿಕೊಳ್ಳುವುದು. ಈ ವಿಷಯಗಳಿಗೆ ಸಂಬಂಧಿಸಿದಂತೆ ಮಕ್ಕಳಿಗೆ ಪ್ರಬಂಧ ಸ್ಪರ್ಧೆ, ಭಾಷಣ ಸ್ಪರ್ಧೆ, ಕ್ವಿಜ್ ಏರ್ಪಡಿಸುವುದು.
3. ಶಾಲಾ ಗ್ರಂಥಾಲಯಗಳಲ್ಲಿ ಮೇಲಿನ ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳಿದ್ದರೆ ಅವುಗಳ ಪಟ್ಟಿ ತಯಾರಿಸಿ ವಿದ್ಯಾರ್ಥಿಗಳಿಗೆ ವಿತರಿಸಿ ಓದಲು ಪ್ರೇರೇಪಿಸುವುದು.
4. ಬಿಜಿವಿಎಸ್, ಕರಾವಿಪ ಹಾಗೂ ಇತರೆ ಜನವಿಜ್ಞಾನ ಸಂಘಟನೆಗಳನ್ನು ಸಂಪರ್ಕಿಸಿ ಪರಿಣಿತರನ್ನು ಆಹ್ವಾನಿಸಿ ಶಾಲೆಗಳಲ್ಲಿ ಈ ಸಂಬಂಧ ಉಪನ್ಯಾಸ ಹಾಗೂ ಪ್ರಶ್ನೋತ್ತರ ಏರ್ಪಡಿಸುವುದು.
5. ಜುಲೈ ಮೊದಲ ವಾರದಲ್ಲಿ ಎಸ್‌ಡಿಎಂಸಿ ಹಾಗೂ ಶಾಲೆಯ ಇತರ ಶಿಕ್ಷಕರು, ಹಿರಿಯ ವಿದ್ಯಾರ್ಥಿಗಳ ಸಭೆ ನಡೆಸಿ ಜುಲೈ 22ರ ಸೂರ್ಯಗ್ರಹಣದ ಬಗ್ಗೆ ತಿಳಿಸಿ ವೀಕ್ಷಿಸಲು ಅರಿವು ಮೂಡಿಸುವುದು.
6. ಶಾಲೆಯಲ್ಲಿ ದೂರದರ್ಶಕವಿದ್ದರೆ ಅದರ ವಿವರ ಹಾಗೂ ಉಪಯೋಗದ ಬಗ್ಗೆ ಮಕ್ಕಳಿಗೆ ಹಾಗೂ ಪೋಷಕರಿಗೆ ವಿವರಿಸುವುದು.
7. ಗ್ರಾಮದ ಹಿರಿಯರನ್ನು ಆಹ್ವಾನಿಸಿ ಈ ಹಿಂದೆ ಸಂಭವಿಸಿದ್ದ ಗ್ರಹಣಗಳ ಬಗ್ಗೆ ಅವರ ಅನುಭವ ಹೇಳಿಸುವುದು.

(ಜಿ. ಕುಮಾರ ನಾಯಕ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ,

ಗೆ,

1) ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಆಡಳಿತ) ಮತ್ತು ಅಭಿವೃದ್ಧಿ, ರವರು ಜರೂರು ಕ್ರಮವಹಿಸಲು ತಿಳಿಸಿದೆ.
2) ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ಜರೂರು ಕ್ರಮವಹಿಸಲು ತಿಳಿಸಿದೆ.
3) ಕಚೇರಿ ಪ್ರತಿ.